ತಂಗಿ ಅನು ಕರೆ ಮಾಡಿ ‘ಇವತ್ತು ಕಾಸ್ಪರ್‌ದು ಹುಟ್ಟಿದಬ್ಬ ಕಣೆ! ಸಂಜೆ ಆರು ಗಂಟೆಗೆ ಕೇಕ್ ಕಟ್ ಮಾಡ್ತೀವಿ, ಎಲ್ಲರೂ ಖಂಡಿತ ಬರಬೇಕು!’. ಹಿಮದಂತೆ ಬೆಳ್ಳಗಿದ್ದ ಅವಳ ಮನೆಯ ಹೊಸ ಅತಿಥಿ ಮುದ್ದು ಮೊಲ ಕಾಸ್ಪರ್ ಆಗಲೇ ವರ್ಷದ ಕೂಸಾಯಿತೆ ಎಂದು ಆಶ್ಚರ್ಯಪಡುತ್ತ, ಅವಳ ಧ್ವನಿಯ ಸಂಭ್ರಮ ಗಮನಿಸಿ, ‘ಅನು, ಪಾಪದ ಮೊಲ ಹುಷಾರು ಕಣೆ, ನಿನ್ನ ಮಗಳ ಹುಟ್ಟುಹಬ್ಬಕ್ಕೆ ಚೆನ್ನಾಗಿ ಕೊಬ್ಬರಿ ಎಣ್ಣೆ ಹಚ್ಚಿ ಎರೆದಂತೆ ಅದಕ್ಕೂ ಎರೆದುಬಿಟ್ಟೀಯ ಮತ್ತೆ’ – ಪ್ರಾಣಿಪ್ರಿಯೆ ಅನುಳಿಗೆ ತಮಾಷೆ ಮಾಡುತ್ತಾ, ಕಾಸ್ಪರಿನ ಆಟಗಳ ಸುತ್ತಲೇ ಒಂದಿಷ್ಟು ಕುಶಲೋಪರಿ ನಡೆಸಿ ಫೋನಿಟ್ಟೆ.

ಅನುಗೆ ಸಣ್ಣ ವಯಸ್ಸಿನಿಂದಲೂ ಸಾಕುಪ್ರಾಣಿಗಳಾದ ನಾಯಿ, ಬೆಕ್ಕು, ಹಸುಗಳನ್ನು ಕಂಡರೆ ಅತೀವ ಪ್ರೀತಿ, ಕಾಳಜಿ. ರಸ್ತೆಯಲ್ಲಿ ಎಲ್ಲೇ ‘ಮಿಯಾವ್’ ಎನ್ನುವ ಕೂಗು ಕೇಳಿಸಿದರೂ ಸಾಕು ಇವಳ ಕಿವಿ ನಿಮಿರಿ ಪ್ರೀತಿ ಉಕ್ಕಿ ಹರಿದು ಸಂಧಿಗೊಂದಿ, ಮೋರಿಯಲ್ಲೆಲ್ಲಾ ಇಣುಕಿ, ಅವುಗಳನ್ನು ಹುಡುಕಿ ಬೆಕ್ಕಿನ ಭಾಷೆಯಲ್ಲೇ ಮುದ್ದುಗರೆಯುತ್ತಾ ನಿಂತು ಬಿಡುವಾಕೆ! ಅಡುಗೆ ಮನೆಗೆ ನುಗ್ಗಿ ಕದ್ದು ಹಾಲು ಕುಡಿಯುವ ನಮ್ಮ ಓಣಿಯ ಗಡವ ಬೆಕ್ಕನ್ನ ನಾವು ಕಂಡಾಗಲೆಲ್ಲ ಓಡಿಸಿದರೆ, ಅನು ಮಾತ್ರ ಅದರ ತಪ್ಪುಗಳನ್ನು ಕ್ಷಮಿಸಿ, ತನ್ನ ಬೋರ್ನ್‌ವಿಟಾ ಹಾಲನ್ನು ಸಹ ಹಾಕಿಬಿಡುತ್ತಿದ್ದಳು! ಆ ಗಡವ ಬೆಕ್ಕೂ ಕದ್ದ ಮಾಲಿನಿಂದಲೇ (ಹಾಲಿನಿಂದಲೇ) ಕೊಬ್ಬಿ ಓಣಿಗೇ ‘ಡಾನ್’ ಆಗಿ, ಅನು ಒಬ್ಬಳನ್ನು ಬಿಟ್ಟು, ನಮನ್ನು ವಿಲ್ಲನ್ ರೀತಿ ನೋಡಿ ಗುರ್ರೆನ್ನುತಿತ್ತು.

ವಾರಕ್ಕೆರಡು ಮೂರು ದಿನ ವಿಸಿಟಿಂಗ್ ಪ್ರೊಫೆಸರ್‌ನಂತೆ ವಯ್ಯಾರವಾಗಿ ಬರುತ್ತಿದ್ದ ಬೆಳ್ಳನೆಯ ಬೀದಿ ಬೆಕ್ಕೊಂದು ಅನುಳಿಂದ ‘ಮೀನು’ ಎಂದು ನಾಮಕರಣ ಮಾಡಿಸಿಕೊಂಡು, ನಮ್ಮ ಕಣ್ಣುತಪ್ಪಿಸಿ ಅವಳು ಹಾಕುತ್ತಿದ್ದ ಹಾಲನ್ನ–ಮೊಸರನ್ನ, ಮೇಲೆ ಹಾಕಿದ ಚಿಪ್ಸ್ ಚಕ್ಕುಲಿ ಚೂರುಗಳನ್ನೂ ಕುರುಕುತ್ತಾ ಹೊಸ ರುಚಿ ಹತ್ತಿಸಿಕೊಂಡಿತ್ತು! ನಮ್ಮ ವಟಾರದ ಹೆಬ್ಬಾಗಿಲಿನಲ್ಲಿ ವಾಚ್‌ಮನ್‌ನಂತೆ ಕೂತಿರುತಿದ್ದ ಕಂದು ಬಣ್ಣದ ಚಂದನೆಯ ಜಾನಿ, ಪಕ್ಕದ ಬೀದಿಯ ರಾಣಿ ನಾಯಿಗಳ ಬ್ರೇಕ್‌ಫಾಸ್ಟ್ ಸಹ ಒಮ್ಮೊಮ್ಮೆ ಅನುಳ ಅಮೃತಹಸ್ತದಿಂದಲೇ ಆಗುತಿತ್ತು! ಅವಳ ಬೆಳಗಿನ ಬೋರ್ನ್‌ವೀಟಾ ಜೊತೆಗದ್ದಿಕೊಂಡು ತಿನ್ನಲು ನಾವು ಅಕ್ಕಂದಿರು ನಿತ್ಯವೂ ಮೂಲೆಯ ಬಾಬು ಅಂಗಡಿಯಿಂದ ತರುತ್ತಿದ್ದ ಬನ್ನು ಎಷ್ಟೋ ಬಾರಿ ಈ ರೀತಿ ‘ಬನ್ನ ದಾಸೋಹ’ಕ್ಕೆ ಉಪಯೋಗವಾಗುತ್ತಿತ್ತು. ನಮ್ಮನೆಯಿಂದ ಎಡವಿಬಿದ್ದರೆ ಸಿಗುವ ಮಿಡ್ಲ್‌ಸ್ಕೂಲಿಗೆ ಅನು ಹೊರಟಾಗ ಈ ಜಾನಿ, ರಾಣಿ, ಮೀನುಗಳ ಒಡ್ಡೋಲಗ ಸಹ ಹೊರಟು ಛತ್ರಿ ಚಾಮರಗಳ ಬದಲು ತಮ್ಮ ಬಾಲ ಅಲ್ಲಾಡಿಸುತ್ತ ಅವಳನ್ನು ಸ್ಕೂಲ್ ಗೇಟಿನವರೆಗೂ ಬಾಡಿ ಗಾರ್ಡುಗಳಂತೆ ಬಿಟ್ಟು ಬರುತ್ತಿದ್ದವು. ಅವಳು ಹಾಕುವ ಬಿಸ್ಕತ್ತು, ಬನ್ನುಗಳ ಋಣಕ್ಕೆ ಕಟ್ಟು ಬಿದ್ದ ಕೆಲ ಬೀದಿನಾಯಿಗಳು ಸಹ ಅನು‘ನಾಯಿ’ಗಳಾಗುತ್ತಿದ್ದವು!

**ದಯೆಯಿರಲಿ ಸಕಲ ಪ್ರಾಣಿಗಳಲಿ ಎನ್ನುವ ಮಾತನ್ನು ಅಕ್ಷರಶಃ ಪಾಲಿಸುವ ಅಮ್ಮ–ಮಗಳ ಪ್ರಾಣಿಪ್ರೀತಿಗೆ ಎಣೆಯೆಲ್ಲಿ? ಮೊಲದ ಹುಟ್ಟುಹಬ್ಬ ಆಚರಿಸಿ, ಅದಕ್ಕೆ ವೀಸಾ ಮಾಡಿಸಿ ವಿದೇಶಕ್ಕೆ ಕೊಂಡೊಯ್ಯುವಷ್ಟು ಆ ಪ್ರೀತಿ ತೀವ್ರವಾದುದು.**



ನನ್ನ ತಂಗಿಯ ಪ್ರಾಣಿಪ್ರೀತಿ ಇಷ್ಟಕ್ಕೆ ಮುಗಿಯುವುದಿಲ್ಲ ಬಿಡಿ. ಒಮ್ಮೆ ಪಕ್ಕದ ಮನೆಯ ಪದ್ಮಾ ಆಂಟಿ ಸಾಕಿದ ಪೊಮೇರಿಯನ್ ಜೂಮಿ ನಾಯಿ ಜೊತೆ ಆಡಲು ಹೋದಾಗ, ಅದು ಬೆರಳಿಗೆ ಕಚ್ಚಿ ಗಾಯವಾದರೂ, ಪೆನ್ಸಿಲ್ ಚೂಪು ಮಾಡಲು ಹೋದಾಗ ಕೈ ಕೊಯ್ಕೊಂಡೆ ಎಂದು ಗಾಬರಿಯಾದ ಅಮ್ಮನಿಗೆ ಸುಳ್ಳು ಹೇಳಿ ದೇವತಾಮನುಷ್ಯಳಾಗಿದ್ದಳು. ನಿಜವಾದ ಕಾರಣ ಗೊತ್ತಾದರೆ ಪದ್ಮಾ ಆಂಟಿ ಪಾಪದ ಜೂಮಿಗೆ ಬಾರಿಸುವ ಬೆಲ್ಟಿನ ಏಟು ತಪ್ಪಿಸಲೆಂದೇ ಹೀಗೆ ಸುಳ್ಳು ಹೇಳಿದ್ದಳು ಎಂದು ನಮಗೆ ನಂತರ ಗೊತ್ತಾಯಿತು. ಮುಂದೆ ಕಾಲೇಜಿಗೆ ಕೊಂಡುಹೋಗಲು ಸ್ಕೂಟಿ ಕಲಿಯುತ್ತಿದ್ದಾಗ, ಪಾದಚಾರಿಗಳಿಗಿಂತ ರಸ್ತೆಯಲ್ಲಿ ಅಡ್ಡಾದಿಡ್ಡಿ ಓಡಾಡುವ ನಾಯಿ, ಹಸು, ಬೆಕ್ಕುಗಳನ್ನು ಕಂಡರೇನೆ ಅವಳಿಗೆ ಹೆಚ್ಚು ಕಾಳಜಿ. ದೂರದಿಂದಲೇ ಅವುಗಳನ್ನು ಕಂಡು ಬೆದರಿ ಆಮೆವೇಗದ ಗಾಡಿಯನ್ನು ಮತ್ತಷ್ಟು ತಗ್ಗಿಸಿ, ತಾನೇ ರಸ್ತೆಯಂಚಿನ ಮೋರಿಯತ್ತ ಸರಿದು, ಅವುಗಳ (ಬಾಲದ) ಕೂದಲೆಳೆ ಕೂಡ ಕೊಂಕದಂತೆ ಗಾಡಿ ಓಡಿಸುತ್ತಿದ್ದಳು. ಮನುಷ್ಯರಿಗಾದರೂ ತನ್ನ (ನಲವತ್ತರ ವೇಗದ) ಗಾಡಿ ಬಡಿದು ಕೈ ಕಾಲು ಮುರಿದರೆ ಸರಿಹೋದೀತು, ಪಾಪದ ಪ್ರಾಣಿಗಳು ತನ್ನ ಚಕ್ರಕ್ಕೆ ಸಿಕ್ಕಿದರೆ ಏನು ಗತಿ ಎನ್ನುವುದೇ ಅನೂಳ ಚಿಂತೆಯಾಗಿ ‘(ಪ್ರಾಣಿ)ದಯೆಯೇ ಧರ್ಮದ ಮೂಲವಯ್ಯ’ ಎಂಬ ವಚನಕ್ಕೆ ಬದ್ಧಳಾಗಿ ನಡೆಯುತ್ತಿದ್ದವಳು ನನ್ನ ತಂಗಿ.

ಮದುವೆಯಾಗಿ ಅವಳ ಪತಿಯ ಕೆಲಸ ಮೇರೆಗೆ ಗಲ್ಫ್ ದೇಶಗಳಾದ ದುಬೈ, ಮಸ್ಕತ್‌ಗಳಲ್ಲಿ ನೆಲೆಸಿದರೂ ಅವಳ ಪ್ರಾಣಿಪ್ರೀತಿ ಎಳ್ಳಷ್ಟೂ ಕಡಿಮೆಯಾಗಿರಲಿಲ್ಲ. ಮಗಳು ಭೂಮಿಕಾಳು ಸಹ ಅಮ್ಮನಂತೆಯೇ ಪ್ರಾಣಿಪ್ರಿಯೆ. ತಮ್ಮ ಬಾಲ್ಕನಿ ಬಂಧುಗಳಾದ ಪಾರಿವಾಳಗಳ ಬಳಗಕ್ಕೆ ಕಾಳು ಹಾಕಿ ನೀರಿಟ್ಟು, ಅವು ಅದನ್ನೆಲ್ಲ ತಿಂದು ಬಾಲ್ಕನಿ ತುಂಬೆಲ್ಲ ಗಲೀಜು ಮಾಡಿ ಪುರ್ರೆಂದು ಹಾರಿದರೂ ಅಮ್ಮ–ಮಗಳು ಒಂದಿಷ್ಟೂ ಬೇಸರಿಸದೆ ಪೊರಕೆ ಹಿಡಿದು ಸ್ವಚ್ಛತಾ ಕಾರ್ಯಕ್ಕಿಳಿಯುತ್ತಿದ್ದರು.

ಅವಳಿದ್ದ ದುಬೈನ ಅಪಾರ್ಟ್‌ಮೆಂಟಿನಲ್ಲಿ ನಾಯಿಗಳನ್ನು ಸಾಕಲು ಅನುಮತಿ ಇಲ್ಲದ ಕಾರಣ ಮೀನಿನ ಅಕ್ವೇರಿಯಮ್ಮು, ಲವ್ ಬರ್ಡ್ಸ್‌ಗಳನ್ನಿಟ್ಟುಕೊಂಡು ಸಾಕುತ್ತ ಅಮ್ಮ–ಮಗಳು ತೃಪ್ತಿಪಟ್ಟುಕೊಳ್ಳಬೇಕಾಯಿತು. ಮಗಳು ಭೂಮಿಕಾಳಂತೂ ಅವಳ ಫ್ಲಾಟಿಗೆ ಬರುತ್ತಿದ್ದ ಬಸುರಿ ಹೆಣ್ಣು ಬೆಕ್ಕೊಂದಕ್ಕೆ ಒಂದು ದೊಡ್ಡ ಸೂಟುಕೇಸನ್ನೇ ಡೆಲಿವರಿ ಹೋಂ ಆಗಿಸಿ, ಅದರ ಆರು ಮರಿಗಳ ಹೆರಿಗೆ–ಬಾಣಂತನ ಮಾಡಿಸಿದ ಅನುಭವ ಇದ್ದಾಕೆ! ಇಷ್ಟೆಲ್ಲದರ ನಡುವೆ ಒಂದು ಮೊಲ ಸಾಕುವ ಅವಳಾಸೆ ಇನ್ನೂ ಪೂರ್ತಿಯಾಗಿರಲಿಲ್ಲ.

ಕಳೆದ ಬಾರಿ ವಾರ್ಷಿಕ ರಜೆಗಾಗಿ ಬೆಂಗಳೂರಿಗೆ ಬಂದಾಗ ಕೊರೊನಾದಿಂದಾಗಿ ತಿಂಗಳಾನುಗಟ್ಟಲೆ ಇಲ್ಲೇ ಉಳಿಯುವಂತಾಗಿ, ಭೂಮಿಕಾಳ ಮೊಲ ಸಾಕುವ ಆಸೆ ಸಾಕಾರಗೊಂಡು, ಮುದ್ದಾದ ಕಾಸ್ಪರ್ ಅವಳಿಗಾಡಲು ಸಂಗಾತಿಯಾಯಿತು. ಮನೆಯೆಲ್ಲಾ ಓಡಾಡುತ್ತ ಹೊಸ ಮುಖಗಳು ಕಂಡರೆ ಮಂಚದ ಕೆಳಗೆ ಬಚ್ಚಿಟ್ಟುಕೊಂಡು ತನ್ನ ಉದ್ದನೆಯ ಕಿವಿ ನಿಮಿರಿಸುತ್ತ, ಪಿಳಿ ಪಿಳಿ ನೋಡುವ ಅದರ ತುಂಟಾಟಗಳನ್ನು ನೋಡುವುದೆಂದರೆ ನಮಗೂ ಖುಷಿ. ಒಮ್ಮೆ ದೇವರಕೋಣೆಯಲ್ಲಿ ಬಚ್ಚಿಟ್ಟುಕೊಂಡು ಅಲ್ಲಿದ್ದ ಮಂತ್ರಾಕ್ಷತೆಯ ಅಕ್ಕಿ ತಿನ್ನಲು ಹೋಗಿ ದೀಪದ ಹತ್ತಿರ ಮೂತಿಯಿಟ್ಟು ಮೀಸೆ ಸುಟ್ಟುಕೊಂಡಿತ್ತಂತೆ! ದೋಸೆ ಮಾಡಿದರೆ ಸಾಕು, ಮೂಗರಳಿಸಿಕೊಂಡು ಅಡುಗೆಕೋಣೆಗೆ ತಪ್ಪದೆ ಹಾಜರಾಗುತ್ತಿದ್ದ ಅದರ ತುಂಟ ಕಥೆಗಳನ್ನು ಅನು ಸ್ವಾರಸ್ಯಕರವಾಗಿ ಹೇಳಿ ನಗಿಸುತ್ತಿದ್ದಳು.

ಅಂದು ಕಾಸ್ಪರಿನ ಹುಟ್ಟುಹಬ್ಬಕ್ಕೆ ಭೂಮಿಕಾ ಸಂಭ್ರಮದಿಂದ ಬಲೂನು ಕಟ್ಟಿ, ತಾನೇ ತಯಾರಿಸಿದ ಬನ್ನಿ ರ‍್ಯಾಬಿಟ್ ವಿನ್ಯಾಸದ ಕ್ಯಾಪುಗಳನ್ನು ಅದಕ್ಕೂ ತೊಡಿಸಿ ನಮ್ಮ ತಲೆಗೂ ಏರಿಸಿದ್ದಳು. ಪುಟಾಣಿ ಜರತಾರಿ ಅಂಗಿ ತೊಟ್ಟು, ಆಶ್ಚರ್ಯದಿಂದ ಪಿಳಿಪಿಳಿ ನೋಡುವಾಗ ಕ್ಯಾರೆಟ್–ಸೊಪ್ಪುಗಳ ವಿಶೇಷ ಕೇಕನ್ನು ಅದರ ಕೈ ಹಿಡಿದು ಕತ್ತರಿಸಿ, ‘ಹ್ಯಾಪಿ ಬರ್ತಡೇ’ ಎಂದು ಖುಷಿಯಿಂದ ಹಾಡುತ್ತ ಅದಕ್ಕೂ ಸ್ಟೆಪ್ ಹಾಕಿಸಿಯೇ ಬಿಟ್ಟಳು!

ರಜೆ ಕಳೆದು ವಾಪಸ್ ಹೊರಡಬೇಕು ಎನ್ನುವಾಗ ಮೊಲಕ್ಕೂ ದುಬೈ ವೀಸಾ ತೆಗೆಸುವ ಸಾಹಸ ಶುರುವಾಯಿತು ನೋಡಿ! ರೇಬಿಸ್ ಮುಂತಾದ ರೋಗಗಳಿಂದ ಮುಕ್ತವಾಗಿರಲು ಲಸಿಕೆಗಳು, ಪಶು ವೈದ್ಯರಿಂದ ಆರೋಗ್ಯ ಪ್ರಮಾಣ ಪತ್ರ, ವೀಸಾ ಸಲುವಾಗಿದ್ದ ನೂರೆಂಟು ನಿಯಮಗಳನ್ನೆಲ್ಲ ಅನುಸರಿಸಿ ಅಂತೂ ನಮ್ಮ ಕಾಸ್ಪರ್ ಟಾಟಾ ಬೈ ಬೈ ಮಾಡುತ್ತಾ ದುಬೈ ಕಡೆಗೆ ಸೀಮೋಲ್ಲಂಘನ ಮಾಡಿಯೇಬಿಟ್ಟಿತು.

ಪ್ರತಿಕ್ರಿಯಿಸಿ: feedback@sudha.co.in